ಕರ್ನಾಟಕ ವಿಧಾನಮಂಡಲದ ನೌಕರರ ಗೃಹ ನಿರ್ಮಾಣ ಸಹಕಾರ ಸಂಘವು ಚುನಾವಣೆಗಳನ್ನು ನಡೆಸದಿರುವ ಬಗ್ಗೆ

೧೬೭೫. ಶ್ರೀ ಬಿ. ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿಧಾನಮಂಡಲ ನೌಕರರ ಗೃಹನಿರ್ಮಾಣ ಸಹಕಾರ ಸಂಘವು ಅಸ್ತಿತ್ವದಲ್ಲಿ ದೆಯೇ?

ಆ) ಹಾಗಿದ್ದಲ್ಲಿ, ಅದು ಎಂದಿನಿಂದ ಅಸ್ತಿತ್ವದಲ್ಲಿದೆ ಹಾಗೂ ಸದರಿ ಸಂಘದಲ್ಲಿ ನೋಂದಣಿ ಮಾಡಿಸಿರುವ ನೌಕರರ ಸಂಖ್ಯೆ ಎಷ್ಟು? ಹಾಗೂ ಸಂಘದವರು ಖರೀದಿಸಿರುವ ಜಮೀನಿನ ವಿಸ್ತೀರ್ಣ ಎಷ್ಟು?

ಇ) ಸದರಿ ಸಂಘಕ್ಕೆ ವಿಧಾನಮಂಡಲದ ನೌಕರರಲ್ಲದವರನ್ನು ನಿಯಮಗಳಿಗೆ ವಿರುದ್ಧವಾಗಿ ಸದಸ್ಯರನ್ನಾಗಿ ಮಾಡಿಕೊಂಡು ಅವರಿಂದ ನಿವೇಶನಕ್ಕಾಗಿ ಹಣವನ್ನು ವಸೂಲಿ ಮಾಡಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಮೇಲ್ಕಂಡ ಸಂಘವು ಸ್ಥಾಪನೆಯಾದಂದಿನಿಂದ ಇಂದಿನವರೆಗೂ ಚುನಾವಣೆಗಳನ್ನು ನಡೆಸದೇ ಇರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಇಲ್ಲದಿದ್ದ ಪಕ್ಷದಲ್ಲಿ ಸದರಿ ಸಂಘವು ನಿಯಮಾವಳಿಗನುಸಾರವಾಗಿ ಕ್ರಮಬದ್ಧವಾಗಿ ಚುನಾವಣೆಯನ್ನು ನಡೆಸಲು ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳುವುದೇ?

ಶ್ರೀ ಎಚ್. ವಿಶ್ವಾಂತಯ್ಯ (ಸಹಕಾರ ಸಚಿವರು).—

ಅ) ಅಸ್ತಿತ್ವದಲ್ಲಿದೆ.

ಆ) ಸದರಿ ಸಂಘವನ್ನು ನೊಂದಣಿ ಕ್ರಮಾಂಕ ಜೆ.ಆರ್.(ಬಿ.ಸಿ.ಆರ್.ಡಿ. ಆರ್.ಇ.ಜೆ.ಎನ್. ೨೧/೪೯೯೮ ೮೨-೮೩ ದಿನಾಂಕ ೨೧-೫-೮೨ ರನ್ವಯ ನೊಂದಣಿ ಮಾಡಲಾಗಿರುತ್ತದೆ. ಈ ಸಂಘವು ೨೧-೫-೮೨ ರಿಂದ ಅಸ್ತಿತ್ವದಲ್ಲಿದೆ. ಸಂಘದಲ್ಲಿ ದಿನಾಂಕ ೩೦-೬-೮೭ಕ್ಕೆ ಒಟ್ಟು ೨೨೪ ಸದಸ್ಯರು ಇರುತ್ತಾರೆ. ಸಂಘದವರು ಲಗ್ಗೇರೆ ಗ್ರಾಮದಲ್ಲಿ ೧೫ ಎಕರೆ ಜಮೀನು ಖರೀದಿಸಲು ಕರಾರು ಪತ್ರ ಮಾಡಿಕೊಂಡಿದ್ದಾರೆ.

ಇ) ಗಮನಕ್ಕೆ ಬಂದಿದೆ.

ಈ) ಸಂಘವು ನೊಂದಣಿಯಾದ ನಂತರ ೨೦-೬-೮೨ರಂದು ಸರ್ವಸದಸ್ಯ ಮಹಾಸಭೆ ನಡೆಸಿ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿದ್ದು ನಂತರ ೮೩-೮೪ ರಿಂದ ೮೫-೮೬ರವರೆಗಿನ ಅವಧಿಗೆ ದಿನಾಂಕ ೨೪-೭-೮೫ರಂದು ಚುನಾವಣೆ ನಡೆಸಿರುತ್ತೆ. ಆದರೆ ೮೬-೮೭ ರಿಂದ ೮೮-೮೯ ಈ ಕಾಲಾವಧಿಗೆ ಚುನಾವಣೆ ನಡೆಸದೇ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ.

ಉ) ಕ್ರಮ ಕೈಗೊಳ್ಳಲಾಗಿದೆ.

ರಾಜ್ಯದಲ್ಲಿ ಕನಿಷ್ಠ ವೇತನ ನಿಗದಿಪಡಿಸಿರುವ ಉದ್ದಿಮೆಗಳು

೧೬೮೭. ಶ್ರೀ ಎನ್. ಎಂ. ಅಡ್ಯಂತಾಯ. (ಸುರತ್ಕಲ್).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕನಿಷ್ಟ ವೇತನ ನಿಗದಿಪಡಿಸಿರುವ ಉದ್ದಿಮೆಗಳು ಹಾಗೂ ಇನ್ನಿತರ ರಂಗಗಳು ಯಾವುವು?

ಆ) ಕನಿಷ್ಠ ವೇತನ ನಿಗದಿಪಡಿಸಿದ ಮೊತ್ತವೆಷ್ಟು (ಉದ್ದಿಮೆವಾರು ವಿವರ ನೀಡುವುದು)?